# ಬೆಲ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ಆಂಡ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್

# ನ್ಯಾಯೋಚಿತ ಪದ್ಧತಿಗಳ ಸಂಹಿತೆ

**ವಿ2@ಆಡಳಿತ ಮಂಡಳಿಯಿಂದ ಜನವರಿ 30, 2018ರಂದು ಅನುಮೋದಿಸಲಾಗಿದೆ**

ಬೆಲ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ಆಂಡ್ ಫೈನಾನ್ಸ್ ಲಿಮಿಟೆಡ್(ಇನ್ನು ಮುಂದೆ "ಕಂಪೆನಿ"/"ಬಿಐಎಫ್‌ಪಿಎಲ್"ಎಂದು ಉಲ್ಲೇಖಿಸಲಾಗುತ್ತದೆ), ಸಣ್ಣ(ಮೈಕ್ರೋ) ಉದ್ಯಮಗಳಿಗೆ, ಅವುಗಳನ್ನು ಆರ್ಥಿಕ ವ್ಯವಸ್ಥೆಯೊಳಗೆ ತರಲು, ಕಿರು ಬಂಡವಾಳ(ಮೈಕ್ರೋ ಫೈನಾನ್ಸ್)ವನ್ನು ಒದಗಿಸುತ್ತದೆ. ಈ ಕಂಪೆನಿಯು ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ)ನೊಂದಿಗೆ ನೋಂದಾಯಿಸಲ್ಪಟ್ಟ ಎನ್‌ಬಿಎಫ್‌ಸಿ–ಎಮ್‌ಎಫ್‌ಐ ಆಗಿದೆ. ಬಿಐಎಫ್‌ಪಿಎಲ್‌ನ ನ್ಯಾಯೋಚಿತ ಪದ್ಧತಿಗಳ ಸಂಹಿತೆ(ಎಫ್‌ಪಿಸಿ)ಯು ಆರ್‌ಬಿಐ ಪ್ರಕಟಿಸಿದ ಮಾರ್ಗಸೂಚಿಗಳ ಪ್ರಕಾರದಂತೆ ಇದೆ.
ಕಂಪೆನಿಯ ಎಫ್‌ಪಿಸಿ ಯನ್ನು, ಸಪ್ಟೆಂಬರ್ 01, 2016ರ ಪ್ರಮುಖ ನಿರ್ದೇಶನ ಡಿಎನ್‌ಬಿಆರ್. ಪಿಡಿ. 008/03.10.119/2016–17ರಂತೆ ಮರು ಪರಿಶೀಲಿಸಲಾಗಿದೆ ಮತ್ತು ಕಾಲ ಕಾಲಕ್ಕೆ ತಿದ್ದುಪಡಿ ಮಾಡಲಾಗಿದೆ ಮತ್ತು ಆಡಳಿತ ಮಂಡಳಿಯಿಂದ ಜನವರಿ 30, 2018ರಂದು ಅನುಮೋದಿಸಲಾಗಿದೆ.

### a. ಸಾಲ ಅರ್ಜಿಗಳು ಮತ್ತು ಅವುಗಳ ಸಂಸ್ಕರಣೆ

- ಸಾಲಗಾರರಿಗೆ ಎಲ್ಲಾ ಸಂವಹನಗಳು ಅವರ ಮಾತೃ ಭಾಷೆಯಲ್ಲಿ ಅಥವಾ ಅವರಿಗೆ ಅರ್ಥವಾಗುವ ಭಾಷೆಯಲ್ಲಿರುತ್ತದೆ;
- ಸಾಲದ ಅರ್ಜಿ ನಮೂನೆಗಳು ಸಾಲಗಾರನ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವ ಅಗತ್ಯ ಮಾಹಿತಿಯನ್ನು ಒಳಗೊಂಡಿರುತ್ತದೆ, ಆದ್ದರಿಂದ ಸಾಲ ಪಡೆಯಲಿಚ್ಛಿಸುವವರು ಇದನ್ನು ಇತರ ಎನ್‌ಬಿಎಫ್‌ಸಿಯಿಂದ ನೀಡಲಾಗುವ ನಿಯಮಗಳು ಮತ್ತು ಷರತ್ತುಗಳೊಂದಿಗೆ ಅರ್ಥಪೂರ್ಣವಾದ ಹೋಲಿಕೆ ಮಾಡಬಹುದು ಮತ್ತು ಒಂದು ನಿರ್ಣಯಕ್ಕೆ ಬರಬಹುದು. ಸಾಲದ ಅರ್ಜಿ ನಮೂನೆಯು, ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ಬಗ್ಗೆ ಮಾಹಿತಿ ನೀಡುತ್ತದೆ;
- ಎಲ್ಲಾ ಅರ್ಜಿಗಳಿಗೆ ಸಾಲದ ಅರ್ಜಿಗಳನ್ನು ಪಡೆದುದಕ್ಕಾಗಿ ಬಿಐಎಫ್‌ಪಿಎಲ್ ಸ್ವೀಕೃತಿ ಪತ್ರ ನೀಡುತ್ತದೆ. ಸಾಲದ ಅರ್ಜಿಗಳನ್ನು ವಿಲೇವಾರಿ ಮಾಡುವ ಕಾಲಮಿತಿಯನ್ನೂ ಸಹ ಸ್ವೀಕೃತಿ ಪತ್ರದಲ್ಲಿ ಸೂಚಿಸಲಾಗುತ್ತದೆ.

### b. ಸಾಲದ ಮೌಲ್ಯಮಾಪನ ಮತ್ತು ಷರತ್ತು ಮತ್ತು/ನಿಬಂಧನೆಗಳು

ಬಿಐಎಫ್‌ಪಿಎಲ್, ಸಾಲಗಾರರಿಗೆ ಸಾಲ ಮಂಜೂರಾತಿ ಪತ್ರವನ್ನು ಮಾತೃ ಭಾಷೆಯಲ್ಲಿ ಅವರಿಗೆ ಅರ್ಥವಾಗುವ ಹಾಗೆ ಲಿಖಿತ ರೂಪದಲ್ಲಿ ತಿಳಿಸಬೇಕು ಅಥವಾ ಮಂಜೂರಾದ ಸಾಲದ ಮೊತ್ತವನ್ನು ಷರತ್ತು ಮತ್ತು ನಿಬಂಧನೆಗಳು, ವಾರ್ಷಿಕ ಬಡ್ಡಿದರ ಮತ್ತು ಅದಕ್ಕೆ ಅರ್ಜಿ ಹಾಕಬೇಕಾದ ವಿಧಾನವನ್ನು ಲಿಖಿತ ರೂಪದಲ್ಲಿ ತಿಳಿಸಿ ಸಾಲಗಾರನು ಅವುಗಳನ್ನು ಒಪ್ಪಿದ್ದಾರೆಂಬುದಕ್ಕೆ ದಾಖಲೆಯನ್ನು ಇಟ್ಟಿಕೊಳ್ಳಬೇಕು.

ಸಾಲಗಾರರಿಗೆ ಬಿಐಎಫ್‌ಪಿಎಲ್ ಸಾಲ ಒಪ್ಪಂದದ ಪ್ರತಿಯನ್ನು ಮಾತೃಭಾಷೆಯಲ್ಲಿ ಸಾಲ ಒಪ್ಪಂದದಲ್ಲಿ ಹೇಳಲಾದ ಎಲ್ಲಾ ಪತ್ರಗಳ ಪ್ರತಿಯೊಂದಿಗೆ ಸಾಲವನ್ನು ವಿತರಿಸುವ ಸಮಯದಲ್ಲಿ ಎಲ್ಲಾ ಸಾಲಗಾರರಿಗೆ ನೀಡಬೇಕು.

### c. ಷರತ್ತು ಮತ್ತು ನಿಬಂಧನೆಗಳಲ್ಲಿನ ಬದಲಾವಣೆಗಳನ್ನು ಒಳಗೊಂಡು ಸಾಲವಿತರಣೆ

- ಬಿಐಎಫ್‌ಪಿಎಲ್ ಸಾಲಗಾರರಿಗೆ ಷರತ್ತು ಮತ್ತು ನಿಬಂಧನೆಗಳಲ್ಲಿ ಏನಾದರೂ ಬದಲಾವಣೆಗಳು ಇದ್ದಲ್ಲಿ ಮತ್ತು ಸಾಲವಿತರಣೆಯ ವೇಳಾಪಟ್ಟಿ, ಬಡ್ಡಿದರಗಳು, ಸೇವಾ ದರಗಳು, ಅವಧಿಗೆ ಮೊದಲೇ ಪಾವತಿಸಬೇಕಾದ ದರಗಳು ಇತ್ಯಾದಿ ವಿವರಗಳನ್ನು ಒಳಗೊಂಡ ಒಂದು ಸುತ್ತೋಲೆಯನ್ನು ಸಾಲಗಾರರಿಗೆ ನೀಡಬೇಕು. ಬಡ್ಡಿದರಗಳು ಮತ್ತು ಇತರ ದರಗಳಲ್ಲಿರುವ

ಬದಲಾವಣೆಗಳು ಭವಿಷ್ಯದಲ್ಲಿ ಅನ್ವಯವಾಗುತ್ತವೆ ಎಂದು ಬಿಐಎಫ್‌ಪಿಎಲ್ ಖಾತರಿಪಡಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ಒಂದು ಸೂಕ್ತ ನಿಬಂಧನೆಯನ್ನು ಸಾಲ ಒಪ್ಪಂಧ ಪತ್ರದಲ್ಲಿ ಅಳವಡಿಸಬೇಕು;

- ಒಪ್ಪಂದದ ಅಡಿಯಲ್ಲಿ ಪಾವತಿಯನ್ನು ಮರುಪಡೆಯುವುದು/ ವೇಗವನ್ನು ಹೆಚ್ಚಿಸುವುದು ಅಥವಾ ಅದರ ಕಾರ್ಯಕ್ಷಮತೆಯು ಸಾಲ ಒಪ್ಪಂದದೊಂದಿಗೆ ತುಲನಾತ್ಮಕವಾಗಿರಬೇಕು;

- ಬಾಕಿ ಇರುವ ಮೊತ್ತವನ್ನು ಮರುಪಾವತಿ ಮಾಡಿದ ನಂತರ ಅಥವಾ ನ್ಯಾಯಯುತವಾಗಿ ಬರಬೇಕಾದ ಸಾಲದ ಎಲ್ಲಾ ಬಾಕಿ ಮೊತ್ತವನ್ನು ಅಥವಾ ಸ್ವಾದೀನತೆಯ ಹಕ್ಕನ್ನು ಪಡೆದ ನಂತರ ಬಿಐಎಫ್‌ಪಿಎಲ್ ಎಲ್ಲ ಭದ್ರತಾ ಪತ್ರಗಳನ್ನು ಹಿಂತಿರುಗಿಸುತ್ತದೆ. ಕಾನೂನಿನ ಕ್ರಮಗಳೇನಾದರೂ ತೆಗೆದುಕೊಳ್ಳಬೇಕಾಗಿದ್ದಲ್ಲಿ ಬಾಕಿ ಇರುವ ಹಕ್ಕು ಭಾದ್ಯತೆಗಳು ಮತ್ತು ಯಾವ ಶರತ್ತುಗಳ ಮೇಲೆ ಮರುಪಾವತಿಯಾಗುವವರೆಗೆ ಬಿಐಎಫ್‌ಪಿಎಲ್ ಹಕ್ಕುಪತ್ರಗಳನ್ನು ತನ್ನೊಡನೆ ಇಟ್ಟುಕೊಳ್ಳಬಹುದ್ದೆಂದು ವಿವರಿಸಿ ಅದರ ಕುರಿತು ಸಾಲಗಾರರಿಗೆ ಒಂದು ನೋಟೀಸನ್ನು ನೀಡಬೇಕು.

### d. ಸಾಮಾನ್ಯ

- ಸಾಲ ಒಪ್ಪಂದದಲ್ಲಿ ನಮೂದಿಸಿದ ಶರತ್ತು ಮತ್ತು ನಿಬಂಧನೆಗಳ ಹೊರತಾಗಿ ಬಿಐಎಫ್‌ಎಲ್ ಸಾಲಗಾರರ ಯಾವುದೇ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. (ಈ ಹಿಂದೆ ಇದ್ದ ಹೊಸ ಮಾಹಿತಿಗಳನ್ನು ಸಾರಗಾರನು ಬಹಿರಂಗ ಪಡಿಸದೇ ಇದ್ದು ಬಿಐಎಫ್‌ಎಲ್ ಗಮನಕ್ಕೆ ಬಂದಿದ್ದಲ್ಲಿ ಹಸ್ತಕ್ಷೇಪ ಮಾಡಬಹುದು.);
- ಸಾಲಗಾರನು ಖಾತೆಯ ವರ್ಗಾವಣೆಗಾಗಿ ಬೇಡಿಕೆ ಇಟ್ಟಲ್ಲಿ, ಅದಕ್ಕೆ ಐಐಎಫ್‌ಎಲ್‌ನ ಒಪ್ಪಿಗೆಯನ್ನು ಅಥವಾ ಯಾವುದೇ ಆಕ್ಷೇಪಣೆಯನ್ನು, ಬೇಡಿಕೆ ಸ್ವೀಕರಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ತಿಳಿಸಲಾಗುವುದು. ಅಂತಹ ವರ್ಗಾವಣೆ ಕಾನೂನಿಗೆ ಅನುಗುಣವಾಗಿ ಪಾರದರ್ಶಕ ಒಪ್ಪಂದದ ಪರಿಭಾಷೆಯಲ್ಲಿರಬೇಕು;
- ಸಾಲ ಮರುಪಡೆದುಕೊಳ್ಳುವ ವಿಷಯದಲ್ಲಿ, ಬಿಐಎಫ್‌ಪಿಎಲ್, ನಿರಂತರವಾಗಿ ಸಾಲಗಾರರಿಗೆ ಅಕಾಲದಲ್ಲಿ ತೊಂದರೆಪಡಿಸುವುದು, ಸಾಲಗಳ ಮರುಪಡೆಯುವಿಕೆಗೆ ಬಲವಂತ ಮಾಡುವುದು ಮುಂತಾದ ಕಿರುಕುಳ ಕೊಡಬಾರದು. ಗ್ರಾಹಕರೊಂದಿಗೆ ಸೂಕ್ತ ರೀತಿಯಲ್ಲಿ ವ್ಯವಹರಿಸಲು ಸಿಬ್ಬಂದಿಗೆ ಸಾಕಷ್ಟು ತರಬೇತಿ ನೀಡಿದೆ ಎಂಬುದನ್ನು ಬಿಐಎಫ್‌ಪಿಎಲ್ ಖಾತರಿಪಡಿಸುತ್ತದೆ;

### e. ನಿರ್ದೇಶಕ ಮಂಡಳಿಯ ಜವಾಬ್ದಾರಿಗಳು

ಈ ವಿಷಯದಲ್ಲಿ ಉದ್ಭವಿಸುವ ವಿವಾದಗಳನ್ನು ಬಗೆಹರಿಸಲು ಬಿಐಎಫ್‌ಪಿಎಲ್‌ನ ನಿರ್ದೇಶಕರ ಮಂಡಳಿಯು ಸಂಸ್ಥೆಯೊಳಗೆ ಸೂಕ್ತವಾದ ಪರಿಹಾರ ನಿಗಾ ವ್ಯವಸ್ಥೆಯನ್ನು ರೂಪಿಸಿದೆ. ಕಂಪೆನಿಯ ಕಾರ್ಯಕರ್ತರ ನಿರ್ಧಾರದಿಂದ ಉದ್ಭವಿಸುವ ಎಲ್ಲಾ ವಿವಾದಗಳನ್ನು ಕೇಳಲು ಮತ್ತು ಕನಿಷ್ಠ ಪಕ್ಷ ನಂತರದ ಉನ್ನತ ಮಟ್ಟದಲ್ಲಿ ವಿಲೇವಾರಿಯಾಗುವುದನ್ನು ಖಚಿತಪಡಿಸಿಕೊಳ್ಳಲು ದೂರು ಪರಿಹಾರ ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ. ನಿರ್ದೇಶಕರ ಮಂಡಳಿಯು ನ್ಯಾಯೋಚಿತ ಪದ್ಧತಿಗಳ ಸಂಹಿತೆಯ ಅನುವರ್ತನೆಯ ನಿಯತಕಾಲಿಕ ವಿಮರ್ಶೆ ಮತ್ತು ವಿವಿಧ ಮಟ್ಟಗಳಲ್ಲಿ ನಿರ್ವಹಣೆಯ ಕುಂದುಕೊರತೆಗಳ ನಿವಾರಣಾ ಕಾರ್ಯವಿಧಾನವನ್ನು ಸಹ ಒದಗಿಸುತ್ತದೆ. ಮಂಡಳಿ ಸೂಚಿದಂತೆ ನಿಯಮಿತ ಅವಧಿಯಲ್ಲಿ ಅಂತಹ ವಿಮರ್ಶೆಗಳ ಒಂದು ಏಕೀಕೃತ ವರದಿಯು ಮಂಡಳಿಗೆ ಸಲ್ಲಿಸಲ್ಪಡುತ್ತದೆ.

### f. ದೂರು ಪರಿಹಾರ ಕಛೇರಿ

ಕಾರ್ಯಾಚರಣಾ ಹಂತದಲ್ಲಿ, ಗ್ರಾಹಕರ ಪ್ರಯೋಜನಕ್ಕಾಗಿ ಬಿಐಎಫ್‌ಪಿಎಲ್ ಈ ಕೆಳಗಿನ ಮಾಹಿತಿಯನ್ನು , ಅದರ ಶಾಖೆಗಳು / ವ್ಯವಹಾರಗಳು ನಡೆಸುವ ಸ್ಥಳಗಳಲ್ಲಿ ಪ್ರಮುಖವಾಗಿ ಪ್ರದರ್ಶಿಸುತ್ತದೆ:

- ಕಂಪೆನಿಯ ವಿರುದ್ಧ ದೂರುಗಳನ್ನು ಪರಿಹರಿಸಲು ಸಾರ್ವಜನಿಕರು ಸಂಪರ್ಕಿಸಬಹುದಾದ ದೂರು ಪರಿಹಾರ ನಿವಾರಣೆಯ ಅಧಿಕಾರಿಗಳ ಹೆಸರು ಮತ್ತು ಸಂಪರ್ಕ ವಿವರಗಳು (ದೂರವಾಣಿ / ಮೊಬೈಲ್ ಸಂಖ್ಯೆ ಹಾಗೂ ಇಮೈಲ್ ವಿಳಾಸ);
- ಒಂದು ತಿಂಗಳೊಳಗೆ ದೂರು / ವಿವಾದವನ್ನು ನಿವಾರಿಸಲಾಗದಿದ್ದರೆ, ಗ್ರಾಹಕರು ಬಿಐಎಫ್‌ಪಿಎಲ್‌ನ ನೋಂದಾಯಿತ ಕಛೇರಿ ಆರ್‌ಬಿಐನ ಯಾವ ಡಿಎನ್‌ಬಿಎಸ್‌ನ ಪ್ರಾದೇಶಿಕ ಕಛೇರಿಯ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೋ ಅದರ ಅಧಿಕಾರಿಗಳಿಗೆ ಮನವಿ ಸಲ್ಲಿಸಬಹುದು; ಇದರ ವಿಳಾಸ ಕೆಳಗಿನಂತಿದೆ:

**ಜನರಲ್ ಮ್ಯಾನೇಜರ್**
**ಡಿಪಾರ್ಟ್‌ಮೆಂಟ್ ಆಫ್ ನಾನ್–ಬ್ಯಾಂಕಿಂಗ್ ಸೂಪರ್‌ವಿಷನ್,**
**ರಿಸರ್ವ್ ಬ್ಯಾಂಕ್ ಆಫ್ ಇಂಡಿಯ, ಫೋರ್ಟ್ ಗ್ಲೇಸಿಸ್**
**ರಾಜಾಜಿ ಸಲೈ, ಚೆನ್ನೈ 600001**
**ದೂರವಾಣಿ ಸಂ: 044–25393406**
**ಫ್ಯಾಕ್ಸ್ ಸಂ: 044–25393797**
**ಫ್ಯಾಕ್ಸ್ ಸಂ: 044–25393797**

**g. ನ್ಯಾಯೋಚಿತ ಪದ್ಧತಿಗಳ ಸಂಹಿತೆಯನ್ನು ತಿಳಿಸುವ ಭಾಷೆ ಮತ್ತು ವಿಧಾನ**

ನ್ಯಾಯೋಚಿತ ಪದ್ಧತಿ ಸಂಹಿತೆಯು ಸಾಲಗಾರರು ತಿಳಿದುಕೊಳ್ಳುವ ಭಾಷೆಯಲ್ಲಿರಬೇಕು;

**h. ಅಧಿಕ ಬಡ್ಡಿ ಹೇರಿಕೆ ಮೇಲಿನ ನಿಯಂತ್ರಣ**

- ಬಿಐಎಫ್‌ಪಿಎಲ್ ಮಂಡಳಿಯು ನಿಧಿ ಸಂಸ್ಥೆಯ ವೆಚ್ಚ, ಮಾರ್ಜಿನ್ ಮತ್ತು ಅಪಾಯದ ಪ್ರೀಮಿಯಂನಂತಹ ಸಂಬಂಧಿತ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಬಡ್ಡಿದರದ ಮಾದರಿಯನ್ನು ಅಳವಡಿಸಿಕೊಳ್ಳಬೇಕು ಮತ್ತು ಸಾಲಗಳು ಮತ್ತು ಮುಂಗಡ ಸಾಲಗಳಿಗೆ ವಿಧಿಸುವ ಬಡ್ಡಿ ದರವನ್ನು ನಿರ್ಧರಿಸುತ್ತದೆ. ಬಡ್ಡಿದರ ಮತ್ತು ವಿವಿಧ ಹಂತದ ಬಡ್ಡಿ ದರಗಳನ್ನು ವಿಧಿಸಲು ಅದರ ಹಿಂದಿರುವ ತರ್ಕಗಳನ್ನು ಅರ್ಜಿನಮೂನೆಯಲ್ಲಿ ಗ್ರಾಹಕರಿಗೆ ಬಹಿರಂಗಪಡಿಸಬೇಕು ಮತ್ತು ಅನುಮತಿ ಪತ್ರದಲ್ಲಿ ಸ್ಪಷ್ಟವಾಗಿ ವಿವರಿಸಬೇಕು.
- ಬಡ್ಡಿ ದರಗಳನ್ನು ಮತ್ತು ಅಪಾಯದ ವಿವಿಧ ಶ್ರೇಣಿಗಳನ್ನು ವ್ಯವಹರಿಸುವ ವಿಧಾನಗಳನ್ನು ಕಂಪೆನಿಯ ವೆಬ್ ತಾಣ (www. Belstar.in)ದಲ್ಲಿ ಹಾಕಬೇಕು ಮತ್ತು ಬಡ್ಡಿದರಗಳು ಬದಲಾದಾಗ ಈ ಮಾಹಿತಿಯನ್ನು ಪರಿಷ್ಕರಿಸಬೇಕು.
- ಬಡ್ಡಿಯ ದರವು ವಾರ್ಷಿಕ ದರವಾಗಿರಬೇಕು, ಇದರಿಂದ ಸಾಲಗಾರನಿಗೆ ಖಾತೆಯ ಮೇಲೆ ವಿಧಿಸುವ ನಿಖರವಾದ ಬಡ್ಡಿದರದ ಅರಿವಿರುತ್ತದೆ.

**i. ಎನ್‌ಬಿಎಫ್‌ಸಿ–ಎಂಎಫ್‌ಐಗಳು:**

ಈ ನಿರ್ದೇಶನಗಳ ಅಧ್ಯಾಯದಲ್ಲಿ ಒದಗಿಸಲಾಗಿರುವಂತೆ ಎಫ್‌ಪಿಸಿಯ ಸಾಮಾನ್ಯ ತತ್ತ್ವಗಳಿಗೆ ಹೆಚ್ಚುವರಿಯಾಗಿ, ಬಿಐಎಫ್‌ಪಿಎಲ್ ಅದಕ್ಕೆ ನಿರ್ದಿಷ್ಟವಾದ ನ್ಯಾಯೋಚಿತ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು:

**(I) ಜನಸಾಮಾನ್ಯ:**

a) ಎಫ್ ಪಿ ಸಿಯನ್ನು ಪ್ರಾದೇಶಿಕ ಭಾಷೆಯಲ್ಲಿ ಬಿಐಎಫ್‌ಪಿಎಲ್ ತನ್ನ ಕಚೇರಿಯಲ್ಲಿ ಮತ್ತು ಶಾಖೆಯ ಆವರಣದಲ್ಲಿ ಆವರಣದಲ್ಲಿ ಪ್ರದರ್ಶಿಸುತ್ತದೆ;

b) ಸಾಲ ನೀಡುವವರಿಗೆ ಪಾರದರ್ಶಕತೆ ಮತ್ತು ನ್ಯಾಯೋಚಿತ ಪದ್ಧತಿಗಳಿಗೆ ಬಿಐಎಫ್‌ಪಿಎಲ್ ಬದ್ಧವಾಗಿದೆ. ಇದನ್ನು ಅನುಗುಣವಾಗಿ ಬಿಐಎಫ್‌ಪಿಎಲ್ ಪ್ರಾದೇಶಿಕ ಭಾಷೆಯಲ್ಲಿ ಒಂದು ಹೇಳಿಕೆಯನ್ನು ನೀಡುತ್ತದೆ ಮತ್ತು ಅದರ ಎಲ್ಲಾ ಶಾಖೆಗಳನ್ನು ಆವರಣದಲ್ಲಿ ಪ್ರದರ್ಶಿಸುತ್ತದೆ ಮತ್ತು ಎಲ್ಲಾ ಸಾಲಗಾರರ ಸಾಲದ ಕಾರ್ಡುಗಳಲ್ಲಿ ಅದನ್ನು ಮುದ್ರಿಸುತ್ತದೆ;

c) ಸಾಲಗಾರರ ಅಸ್ತಿತ್ವದಲ್ಲಿರುವ ಸಾಲದ ಬಗ್ಗೆ ಅಗತ್ಯವಾದ ವಿಚಾರಣೆಯನ್ನು ಮಾಡಲು ಬಿಐಎಫ್‌ಪಿಎಲ್ ಕ್ಷೇತ್ರ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆ;

d) ಅದರ ಸಾಲಗಾರರಿಗೆ ಬಿಐಎಫ್‌ಪಿಎಲ್ ನೀಡುವ ಎಲ್ಲಾ ತರಬೇತಿ ಉಚಿತವಾಗಿದೆ. ಸಾಲದ / ಇತರ ಉತ್ಪನ್ನಗಳಿಗೆ ಸಂಬಂಧಿಸಿದ ವಿಧಾನ ಮತ್ತು ವ್ಯವಸ್ಥೆಗಳ ಬಗ್ಗೆ ಸಾಲಗಾರರಿಗೆ ಸಂಪೂರ್ಣ ಅರಿವು ಮೂಡಿಸಲು ಬೇಕಾದ ತರಬೇತಿಯನ್ನು ನೀಡಲು ಕ್ಷೇತ್ರದ ಎಲ್ಲಾ ಸಿಬ್ಬಂದಿಗಳೂ ತರಬೇತಿ ನೀಡಲಾಗಿದೆ;

e) ಬಿಐಒಫ್‌ಪಿಎಲ್ ಅದರ ಎಲ್ಲಾ ಕಚೇರಿಗಳಲ್ಲಿ ಒದಗಿಸುವ ಮಾಹಿತಿ ಪುಸ್ತಿಕೆಗಳಲ್ಲಿ ಸ್ಥಳೀಯ ಭಾಷೆಯಲ್ಲಿ ಇದು ವಿಧಿಸುವ ಪರಿಣಾಮಕಾರಿ ಬಡ್ಡಿ ದರವನ್ನು ಪ್ರದರ್ಶಿಸುತ್ತದೆ. ಬಿಐಒಫ್‌ಪಿಎಲ್ ಯ ದೂರು ಪರಿಹಾರ ವ್ಯವಸ್ಥೆಯನ್ನು ಅದರ ಎಲ್ಲಾ ಕಚೇರಿಗಳಲ್ಲಿಯೂ ಪ್ರಮುಖವಾಗಿ ಪ್ರದರ್ಶಿಸಲಾಗುತ್ತದೆ;

f) ಸಿಬ್ಬಂದಿಯ ಅನುಚಿತ ವರ್ತನೆಯನ್ನು ತಡೆಗಟ್ಟುವ ಮತ್ತು ಸಾಲಗಾರನ ದೂರನ್ನು ಸಕಾಲದಲ್ಲಿ ಪರಿಹರಿಸಲು ಬಿಐಒಫ್‌ಪಿಎಲ್ ಬದ್ಧವಾಗಿರುತ್ತದೆ. ಮೇಲಿನ ಘೋಷಣೆಯನ್ನು ಸಾಲಗಾರನಿಗೆ ನೀಡಿದ ಸಾಲ ಒಪ್ಪಂದದಲ್ಲಿ ಸಹ ಮಾಡಲಾಗುವುದು;

g) ಆರ್‌ಬಿಐನ ಕೆವೈಸಿ ಮಾರ್ಗಸೂಚಿಗಳನ್ನು ಅನುಸರಿಸುವುದನ್ನು ಬಿಐಒಫ್‌ಪಿಎಲ್ ಖಚಿತಪಡಿಸುತ್ತದೆ. ಸಾಲಗಾರರ ಮರುಪಾವತಿಯ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಲು ಪ್ರತಿಯೊಬ್ಬ ಸಾಲಗಾರನ ಸಾಮರ್ಥ್ಯವನ್ನು ನಿರ್ಣಯಿಸಲಾಗುವುದು;

h) ಎಲ್ಲಾ ಮಂಜೂರಾತಿ ಮತ್ತು ಸಾಲಗಳ ವಿತರಣೆ ಕೇಂದ್ರ ಸ್ಥಳದಲ್ಲಿ ಮಾತ್ರ ಮಾಡಲಾಗುವುದು ಮತ್ತು ಒಂದಕ್ಕಿಂತ ಹೆಚ್ಚು ವ್ಯಕ್ತಿಗಳು ಈ ಕಾರ್ಯದಲ್ಲಿ ತೊಡಗುತ್ತಾರೆ. ಹೆಚ್ಚುವರಿಯಾಗಿ, ವಿತರಣೆ ಕಾರ್ಯದ ನಿಕಟ ಮೇಲ್ವಿಚಾರಣೆ ಇರುತ್ತದೆ;

i) ಬಿಐಎಫ್‌ಪಿಎಲ್ ಸಾಲವನ್ನು ಅನ್ವಯಿಸುವ ಪ್ರಕ್ರಿಯೆಯು ತೊಡಕಿನವಲ್ಲ ಮತ್ತು ಪೂರ್ವ ನಿರ್ಧಾರಿತ ಸಮಯದ ಅನುಸಾರವಾಗಿ ಸಾಲದ ವಿತರಣೆಗಳನ್ನು ಮಾಡಲಾಗುತ್ತದೆ ಎಂದು ಖಚಿತಪಡಿಸುತ್ತದೆ.

**(II) ಸಾಲ ಒಪ್ಪಂದ / ಸಾಲ ಪತ್ರದಲ್ಲಿ ಪ್ರಕಟಣೆಗಳು**

a) ಸಾಲದ ಒಪ್ಪಂದಕ್ಕೆ ಬಿಐರ್ಫ್‌ಪಿಎಲ್, ಆಡಳಿತ ಮಂಡಳಿಯಿಂದ ಅನುಮೋದಿತ ಸಾಲದ ಒಪ್ಪಂದದ ನಮೂನೆಯನ್ನು ಹೊಂದಿದೆ. ಸಾಲ ಒಪ್ಪಂದವು ಸ್ಥಳೀಯ ಭಾಷೆಯಲ್ಲಿರುತ್ತದೆ;

b) ಸಾಲ ಒಪ್ಪಂದದಲ್ಲಿ ಕೆಳಗಿನವುಗಳನ್ನು ವಿಷದಪಡಿಸಲಾಗಿದೆ:

- ಸಾಲದ ಎಲ್ಲಾ ನಿಯಮಗಳು ಮತ್ತು ಷರತ್ತುಗಳು.
- ಸಾಲದ ಬೆಲೆ ಕೇವಲ ಮೂರು ಘಟಕಗಳನ್ನು ಒಳಗೊಂಡಿರುತ್ತದೆ; ಬಡ್ಡಿ ಶುಲ್ಕ, ಪ್ರಕ್ರಿಯೆ ಶುಲ್ಕ ಮತ್ತು ವಿಮಾ ಪ್ರೀಮಿಯಂ (ಅದು ಆಡಳಿತಾತ್ಮಕ ಶುಲ್ಕಗಳನ್ನು ಒಳಗೊಂಡಿರುತ್ತದೆ)
- ವಿಳಂಬಿತ ಪಾವತಿಯ ಮೇಲೆ ಯಾವುದೇ ದಂಡ ವಿಧಿಸಲಾಗುವುದಿಲ್ಲ.
- ಸಾಲಗಾರರಿಂದ ಯಾವುದೇ ಭದ್ರತಾ ಠೇವಣಿ / ಮಾರ್ಜಿನ್ ಅನ್ನು ಸಂಗ್ರಹಿಸಲಾಗುವುದಿಲ್ಲ
- ಸಾಲಗಾರನು ಒಂದಕ್ಕಿಂತ ಹೆಚ್ಚು ಎಸ್‌ಹೆಚ್‌ಜಿ/ ಜೆಎಲ್‌ಜಿಯ ಸದಸ್ಯರಾಗಿರಬಾರದು
- ಸಾಲದ ಮಂಜೂರಾತಿ ಮತ್ತು ಮೊದಲ ಕಂತಿನ ಮರುಪಾವತಿಯ ನಿಗದಿತ ದಿನಾಂಕದ ನಡುವೆ ನಿರ್ಬಂಧ
- ಸಾಲಗಾರರ ಮಾಹಿತಿಯ ಗೌಪ್ಯತೆಯನ್ನು ಕಾಪಾಡಿಕೊಳ್ಳಲಾಗುವುದು ಎಂಬ ಭರವಸೆ.

c) ಸಾಲದ ಕಾರ್ಡ್ ಬ್ಯಾಂಕಿಂಗ್‌ಯೇತರ ಹಣಕಾಸು ಕಂಪನಿಯಲ್ಲಿ ನಿರ್ದಿಷ್ಟಪಡಿಸಿದಂತೆ ಕೆಳಗಿನ ವಿವರಗಳನ್ನು ತೋರ್ಪಡಿಸುತ್ತದೆ – ಮೈಕ್ರೋ ಫೈನಾನ್ಸ್ ಇನ್ಸ್ಟಿಟ್ಯೂಷನ್ಸ್ (ರಿಸರ್ವ್ ಬ್ಯಾಂಕ್) ನಿರ್ದೇಶನಗಳು, 2011

- ವಿಧಿಸುವ ಬಡ್ಡಿಯ ಪರಿಣಾಮಕಾರಿ ದರ;
- ಸಾಲಕ್ಕೆ ಸಂಬಂಧಿಸಿದ ಎಲ್ಲಾ ಇತರ ನಿಯಮಗಳು ಮತ್ತು ಷರತ್ತುಗಳು;
- ಸಾಲಗಾರರನ್ನು ಸಮರ್ಪಕವಾಗಿ ಗುರುತಿಸುವಂತಹ ಮಾಹಿತಿ ಮತ್ತು ಸ್ವೀಕರಿಸಿದ ಕಂತುಗಳು ಮತ್ತು ಅಂತಿಮ ವಿಲೇವಾರಿ ಸೇರಿದಂತೆ ಎಲ್ಲಾ ಮರುಪಾವತಿಗಳಿಗೆ ಬಿಐಎಫ್‌ಪಿಎಲ್ ಮೂಲಕ ಸ್ವೀಕೃತಿಗಳನ್ನು ಒದಗಿಸುವುದು;
- ಸಾಲಪತ್ರವು ಬಿಐಎಫ್‌ಪಿಎಲ್ ಸ್ಥಾಪಿಸಿದ ದೂರು ಪರಿಹಾರ ವ್ಯವಸ್ಥೆಯನ್ನು ಮತ್ತು ನೋಡಲ್ ಅಧಿಕಾರಿಯ ಹೆಸರು ಮತ್ತು ಸಂಪರ್ಕ ಸಂಖ್ಯೆಯನ್ನು ನಮೂದಿಸುತ್ತದೆ;
- ಕ್ರೆಡಿಟ್–ರಹಿತ ಉತ್ಪನ್ನಗಳನ್ನು ಒದಗಿಸುವುದು ಸಾಲಗಾರರ ಪೂರ್ಣ ಒಪ್ಪಿಗೆಯೊಂದಿಗೆ ಇರುತ್ತದೆ ಮತ್ತು ಶುಲ್ಕ ರಚನೆಯನ್ನು ಸಾಲದ ಕಾರ್ಡ್‌ನಲ್ಲಿಯೇ ನಮೂದಿಸಲಾಗುತ್ತದೆ ಮತ್ತು ;
- ಸಾಲ ಕಾರ್ಡ್‌ನಲ್ಲಿರುವ ಎಲ್ಲ ನಮೂದುಗಳು ಸ್ಥಳೀಯ ಭಾಷೆಯಲ್ಲಿರುತ್ತವೆ.

**(III) ಸಾಲ ವಸೂಲಿ ಮಾಡಲು ದಬ್ಬಾಳಿಕೆ ರಹಿತ ವಿಧಾನಗಳು**

- ಸಾಲ ವಸೂಲಿಯನ್ನು ಸಾಮಾನ್ಯವಾಗಿ ಗೊತ್ತುಪಡಿಸಿದ ಕೇಂದ್ರ ಸ್ಥಳದಲ್ಲಿ ಮಾತ್ರವೇ ಮಾಡಲಾಗುವುದು. ಸತತವಾಗಿ 2 ಅಥವಾ ಅದಕ್ಕೂ ಹೆಚ್ಚು ಬಾರಿ ಸಾಲಗಾರನು ಗೊತ್ತುಪಡಿಸಿದ ಕೇಂದ್ರ ಸ್ಥಳದಲ್ಲಿ ಕಾಣಿಸಿಕೊಳ್ಳಲು ವಿಫಲನಾದ ಅಸಂದರ್ಭಗಳಲ್ಲಿ ಮಾತ್ರ ಕ್ಷೇತ್ರ ಸಿಬ್ಬಂದಿಗೆ ಸಾಲಗಾರನ ನಿವಾಸ ಸ್ಥಳದಲ್ಲಿ ಅಥವಾ ಕಾರ್ಯ ಸ್ಥಳದಲ್ಲಿ ಸಾಲ ವಸೂಲಿ ಮಾಡಲು ಅವಕಾಶ ನೀಡಲಾಗುತ್ತದೆ.
- ಬಿಐಎಫ್‌ಪಿಎಲ್ ತಮ್ಮ ಕ್ಷೇತ್ರ ಸಿಬ್ಬಂದಿಯ ನೇಮಕಾತಿ, ತರಬೇತಿ ಮತ್ತು ಮೇಲ್ವಿಚಾರಣೆಗಾಗಿ ಮತ್ತು ಅವರ ನೀತಿ ಸಂಹಿತೆಗೆ ಸಂಬಂಧಿಸಿದಂತೆ ಮಂಡಳಿಯಿಂದ ಅನುಮೋದಿತ ನೀತಿಯನ್ನು ಹೊಂದಿದೆ. ನೀತಿ ಸಂಹಿತೆಯು ಸಿಬ್ಬಂದಿಗೆ ಅಗತ್ಯವಿರುವ ಕನಿಷ್ಠ ವಿದ್ಯಾರ್ಹತೆಗಳನ್ನು ಮತ್ತು ಗ್ರಾಹಕರೊಂದಿಗೆ ವ್ಯವಹರಿಸಲು ಅವರಿಗೆ ಅಗತ್ಯ ತರಬೇತಿ ಸಾಧನಗಳನ್ನು ಗುರುತಿಸುತ್ತದೆ. ಕ್ಷೇತ್ರ ಸಿಬ್ಬಂದಿಗೆ ನೀಡುವ ತರಬೇತಿಯು, ಸಾಲಗಾರರೊಂದಿಗೆ ಸೂಕ್ತವಾದ ನಡವಳಿಕೆ ಮತ್ತು ಯಾವುದೇ ನಿಂದನೀಯ ಅಥವಾ ದಬ್ಬಾಳಿಕೆಯ ಸಾಲ ಸಂಗ್ರಹ/ವಸೂಲಿ ಪದ್ಧತಿಗಳನ್ನು ಅಳವಡಿಸದೇ ಇರುವಂತಹ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ. ಸಿಬ್ಬಂದಿಗೆ ನೀಡುವ ಪರಿಹಾರ ವಿಧಾನಗಳು ಕೇವಲ ಸಾಲದ ಹರಿವಿನ ಪ್ರಮಾಣ ಮತ್ತು ಸಾಲ ವಸೂಲಿ ಮಾಡಿದ ಅಂಶಗಳನ್ನು ಮಾತ್ರ

ಪರಿಗಣಿಸದೇ ಸೇವೆಯ ವ್ಯಾಪ್ತಿ ವಲಯ ಮತ್ತು ಸಾಲಗಾರರ ತೃಪ್ತಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತದೆ. ನೀತಿ ಸಂಹಿತೆಯನ್ನು ಪಾಲಿಸದ ಪ್ರಕರಣಗಳಲ್ಲಿ ಕ್ಷೇತ್ರ ಸಿಬ್ಬಂದಿಗೆ ದಂಡ ವಿಧಿಸಲಾಗುವುದು. ಸೂಕ್ಷ್ಮ ಪ್ರದೇಶಗಳಲ್ಲಿ ಸಾಲ ವಸೂಲಿಗೆ ಬಿಐಎಫ್‌ಪಿಎಲ್ ನೌಕರರನ್ನು ಮಾತ್ರ ಬಳಸುತ್ತದೆ.

**(IV) ಆಂತರಿಕ ನಿಯಂತ್ರಣ ವ್ಯವಸ್ಥೆ**

ಎಫ್‌ಪಿಸಿಯ ಅನುಸರಣೆಯ ಜವಾಬ್ದಾರಿಯನ್ನು ಕಂಪೆನಿಯ ಆಂತರಿಕ ಪರಿಶೋಧನಾ ಮುಖ್ಯಸ್ಥರಿಗೆ ಹೊರಿಸಲಾಗಿದೆ. ಬಿಐಎಫ್‌ಪಿಎಲ್ ಆಂತರಿಕ ಪರಿಶೋಧನಾ ಇಲಾಖೆಯನ್ನು ಹೊಂದಿದೆ, ಇದು ಎಫ್‌ಪಿಸಿಯ ಅನುಸರಣೆಯನ್ನು ಪರಿಶೀಲಿಸಲು ಕಾರ್ಯಾಚರಣೆಗಳ ಎಲ್ಲಾ ಅಂಶಗಳ ಆವರ್ತಕ ಪರಿಶೋಧನೆಯನ್ನು ಮಾಡುತ್ತದೆ.